ಕರ್ನಾಟಕ ವಿಧಾನ ಸಭೆ

ಬುಧವಾರ 10ನೇ ಮಾರ್ಚ್ 1993 ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.15 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಪಿ. ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಟಿ. ನರಸೀಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ

301 (1608): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):–

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಟಿ. ನರಸೀಪುರ ತಾಲ್ಲೂಕಿನಲ್ಲಿರುವ ಪ್ರಾ.ಆ. ಕೇಂದ್ರಗಳೆಷ್ಟು;

ಆ) ಅಲ್ಲಿ ಖಾಲಿ ಇರುವ ಹಾಗೂ ಕಾರ್ಯ ನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ ಎಷ್ಟು;

ಇ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಪ್ರಾ.ಆ. ಕೇಂದ್ರಗಳು – 9
ಪ್ರಾ. ಆ. ಘಟಕಗಳು – 2
ಸಾರ್ವಜನಿಕ ಆಸ್ಪತ್ರೆ – 1

ಆ) ಖಾಲಿ ಇರುವ ವೈದ್ಯರ ಸಂಖ್ಯೆ:1, ಕಾರ್ಯ ನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ 18

ಇ) – ಹೌದು –

ಶ್ರೀ ಎಂ. ಶ್ರೀನಿವಾಸಯ್ಯ:– ಮಾನ್ಯ ಅಧ್ಯಕ್ಷರೆ, ಟಿ. ನರಸೀಪುರ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು ? ಎರಡನೆಯ ಪ್ರಶ್ನೆ, ಅಲ್ಲಿ ಖಾಲಿ ಇರುವ ಹಾಗೂ ಕಾರ್ಯ ನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ ಎಷ್ಟು ? ಮೂರನೆಯದಾಗಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು ಸರ್ಕಾರವು ಕ್ರಮಕೈಗೊಳ್ಳಲಾಗುವುದೇ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕರ ಸಚಿವರು, ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, ಟಿ. ನರಸೀಪುರ ತಾಲ್ಲೂಕಿನಲ್ಲಿ 9ಪ್ರೈಮರಿ ಹೆಲ್ತ್ ಸೆಂಟರ್‌ಗಳು ಹಾಗೂ 2ಪ್ರೈಮರಿ ಹೆಲ್ತ್ ಯೂನಿಟ್, ಹಾಗೂ ಒಂದು ಜನರಲ್ ಹಾಸ್ಪಿಟಲ್ ಇದೆ. ಅದರಲ್ಲಿ 19 ವೈದ್ಯರುಗಳ ಹುದ್ದೆ ಸ್ಯಾಂಕ್ಷನ್ ಮಾಡಿದ್ದು 18 ವೈದ್ಯರುಗಳು ಕೆಲಸ ಮಾಡುತ್ತಿದ್ದಾರೆ. ಒಂದು ಮಾತ್ರ ವೇಕೆನ್ಸಿ ಇದೆ. ಅದನ್ನು ನಾವು ಬೇಗನೆ ಭರ್ತಿ ಮಾಡುತ್ತೇವೆ.

ನಗರದಲ್ಲಿರುವ ರಕ್ತ ನಿಧಿಗಳ ಸಂಖ್ಯೆ

302 (1696): ಶ್ರೀ ಡಿ. ಪುಲ್ಲಿನ್‌ಘಾ, (ನಾಮ ನಿರ್ದೇಶನ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?